

# ಅಧ್ಯಾಯ–III

# ಪುರಾತತ್ವ ಸ್ಮಾರಕಗಳನ್ನು ಗುರುತಿಸುವಿಕೆ ಹಾಗೂ ನಿರ್ಧಾರಣೆ

## ಅಧ್ಯಾಯ: III

## ಪುರಾತತ್ವ ಸ್ಮಾರಕಗಳನ್ನು ಗುರುತಿಸುವಿಕೆ ಹಾಗೂ ನಿರ್ಧಾರಣೆ

*ಯಾವುದೇ ಐತಿಹಾಸಿಕ ಸ್ಮಾರಕಗಳನ್ನು ಗುರುತಿಸುವ ಮೂಲಕ ಹಾಗೂ ಒಂದು ಸಂರಕ್ಷಿತ ಪುರಾತತ್ವ ಸ್ಮಾರಕ ಎಂಬುದಾಗಿ ಅಧಿಸೂಚನೆ ಹೊರಡಿಸುವ ಮೂಲಕ ಪರಿಣಾಮಕಾರಿತ್ವದಿಂದ ಸಂರಕ್ಷಿಸಬಹುದು. ಈ ಅಧ್ಯಾಯವು ಪುರಾತತ್ವ ಸ್ಮಾರಕಗಳ ಸಂಶೋಧನೆ, ಉತ್ಖನನಗೊಳಿಸುವಿಕೆ ಹಾಗೂ ಅಂತಹ ಪುರಾತತ್ವ ಸ್ಮಾರಕಗಳ ಅಧಿಸೂಚನೆ ಹೊರಡಿಸುವಿಕೆಗೆ ಸಂಬಂಧಿತ ಅಂಶಗಳನ್ನು ಹೊರತಂದಿರುವುದು ಹಾಗೂ ಪ್ರಸ್ತುತ ಇರುವಂತಹ ಸಾಂಸ್ಥಿಕ ವ್ಯವಸ್ಥೆಗಳಲ್ಲಿನ ಕುಂದುಕೊರತೆಗಳು ಅಥವಾ ಲೋಪದೋಷಗಳನ್ನು ಸ್ಪಷ್ಟಪಡಿಸಿರುವುದು. 2020ರಲ್ಲಿ ಸಂರಕ್ಷಣೆ ಯೋಜನೆಯನ್ನು[10] ಜಾರಿಗೆ ತರುವುದಕ್ಕೆ ಮುಂಚಿತವಾಗಿ ಇಲಾಖೆಯು ಸಂಶೋಧನಾ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಯಾವುದೇ ಕ್ರಿಯಾ ಯೋಜನೆಯನ್ನು ಹೊಂದಿರಲಿಲ್ಲ. ಉತ್ಖನನ ಚಟುವಟಿಕೆಗಳಿಗೆ ಪುರಾತತ್ವ ಸ್ಮಾರಕಗಳ ಐತಿಹಾಸಿಕ ಮೌಲ್ಯದ ಆಧಾರದ ಮೇರೆಗೆ ಆದ್ಯತೆಯನ್ನು ನೀಡಿರಲಿಲ್ಲ ಹಾಗೂ ಅವುಗಳು ಅಪೂರ್ಣವಾಗಿ ಉಳಿದಿದ್ದವು. ಇಲಾಖೆಯು ರಾಜ್ಯದಲ್ಲಿನ 844 ಪುರಾತತ್ವ ಸ್ಮಾರಕಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ಹೊರಡಿಸಿದ್ದಿತಾದರು, ಜಂಟಿ ಭೌತಿಕ ಪರಿಶೀಲನೆಯ ವೇಳೆಯಲ್ಲಿ ಅವುಗಳಲ್ಲಿ ಕೆಲವನ್ನು ಗುರುತಿಸಲಾಗಲಿಲ್ಲ. ಮುಂದುವರೆದು ಸ್ಥಳ, ಹೊಂದಿಕೊಂಡಂತಿರುವ ಪ್ರಾಚೀನ ಅವಶೇಷಗಳು, ಇತ್ಯಾದಿಗಳನ್ನು ಸೆರೆಹಿಡಿದಿರಲಿಲ್ಲ. ಇದು ಐತಿಹಾಸಿಕ ಸ್ಮಾರಕಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಹಾಳಾಗುವಲ್ಲಿ ಹಾಗೂ ಅವುಗಳನ್ನು ತಿರಸ್ಕೃತ ದೃಷ್ಟಿಯಿಂದ ನೋಡುವಲ್ಲಿ ಪರಿಣಮಿಸಿದ್ದಿತು.*

### ಪ್ರಕ್ರಿಯೆಗಳು

**3.1** ಅಂತಹ ಸ್ಮಾರಕಗಳನ್ನು ಸಂರಕ್ಷಿತ ಸ್ಮಾರಕಗಳು ಎಂಬುದಾಗಿ ಘೋಷಿಸತಕ್ಕದ್ದು ಎಂಬುದಾಗಿ ಅಭಿಪ್ರಾಯಪಟ್ಟಲ್ಲಿ ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿತ ಸ್ಮಾರಕಗಳು ಎಂಬುದಾಗಿ ಘೋಷಿಸಲು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳ ಅಧಿನಿಯಮ, 1961ರ (ಅಧಿನಿಯಮ) ಪರಿಚ್ಛೇದ 4 ಸರ್ಕಾರಕ್ಕೆ ಅಧಿಕಾರಗಳನ್ನು ನೀಡಿರುತ್ತದೆ. ಪ್ರಾಚೀನ ಸ್ಮಾರಕಗಳನ್ನು ಗುರುತಿಸುವುದು ಮತ್ತು ನಿರ್ಧರಣೆ ಮಾಡುವುದು ಸಂರಕ್ಷಣೆ ಮತ್ತು ಸುರಕ್ಷತೆಯ ಮೊದಲ ಕ್ರಮವಾಗಿರುತ್ತದೆ.

**ರೇಖಾ ಚಿತ್ರ ಸಂಖ್ಯೆ 3.1: ಸಂರಕ್ಷಣೆಯವರೆವಿಗೂ ಸಂಶೋಧನೆ ಅಥವಾ ಉತ್ಖನನದ ಪ್ರಕ್ರಿಯೆ**




### ಪರಿಶೋಧನೆ /ಸಮೀಕ್ಷೆ

**3.2** ಒಂದು ಪುರಾತತ್ವಶಾಸ್ತ್ರೀಯ ಪರಿಶೋಧನೆಯನ್ನು ಸಾಮಾನ್ಯವಾಗಿ ಸಂಶೋಧನೆಯ ಅತ್ಯುತ್ತಮವಾಗಿ ವಿನ್ಯಾಸಗೊಳಿಸ್ಪಟ್ಟಿರುವ ಸಂಶೋಧನೆಯ ಕಾರ್ಯಕ್ರಮದ ಆಧಾರದ ಮೇರೆಗೆ ನೀಡಲಾಗಿರುವ ಯೋಜನೆಯ ಒಳಗೆಯೇ ಸಂಬಂಧಿತ ಕ್ಷೇತ್ರದಿಂದ ಗರಿಷ್ಠ ಪುನರ್–ಗಳಿಸಬಹುದಾದಂತಹ ಮಾಹಿತಿಯನ್ನು ಪಡೆದುಕೊಳ್ಳುವ ಸಲುವಾಗಿ ನಡೆಸಲಾಗುವುದು.

[10] ಕರ್ನಾಟಕ ರಾಜ್ಯದಲ್ಲಿ 25,000 ಪ್ರಾಚೀನ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗಾಗಿ 2020–21ರ ಆಯವ್ಯಯ ಭಾಷಣದಲ್ಲಿ ಯೋಜನೆಯನ್ನು ಪ್ರಕಟಿಸಲಾಗಿದ್ದಿತು.

ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ 25,000ಕ್ಕೂ ಹೆಚ್ಚಿನ ಐತಿಹಾಸಿಕವಾಗಿ ಗಮನಾರ್ಹವಾದಂತಹ ದೇವಸ್ಥಾನಗಳು, ಪ್ರಾಚೀನ ಸ್ಥಳಗಳು ಮತ್ತು ಸ್ಮಾರಕಗಳನ್ನು ಸಂರಕ್ಷಿಸುವ ಹಾಗೂ ಪುನರ್–ಸ್ಥಾಪಿಸುವ ಸಲುವಾಗಿ ಸಂರಕ್ಷಣೆ ಯೋಜನೆಯನ್ನು ಜಾರಿಗೆ ತಂದಿತು (ಮಾರ್ಚ್–2020). ಈ ಯೋಜನೆಯನ್ನು ಎಲ್ಲಾ ವಿಭಾಗಗಳನ್ನು ವ್ಯಾಪಿಸಿದಂತೆ ಹಂತವಾರು ಕಾರ್ಯಗತಗೊಳಿಸಬೇಕಿದ್ದಿತು. 2019–22ರಲ್ಲಿ ಈ ಯೋಜನೆಯ ಅಡಿಯಲ್ಲಿ ₹ 54.90[11] ಲಕ್ಷ ಮೊತ್ತವನ್ನು ಭರಿಸುವ ಮೂಲಕ (₹ 60.00 ಲಕ್ಷ ಮೊತ್ತದಷ್ಟು ಆಯವ್ಯಯ ಹಂಚಿಕೆಗೆ ಪ್ರತಿಯಾಗಿ) ರಾಜ್ಯದ 240 ತಾಲ್ಲೂಕುಗಳ ಪೈಕಿ 19 ತಾಲ್ಲೂಕುಗಳ ಅಡಿಯಲ್ಲಿನ ಗ್ರಾಮಗಳಲ್ಲಿ ಪ್ರಾಚೀನ ಸ್ಮಾರಕಗಳ ಸಮೀಕ್ಷೆಯನ್ನು ಕೈಗೆತ್ತಿಕೊಂಡಿತು. 19[12] ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಗ್ರಾಮವಾರು ಅಂತಿಮ ವರದಿಗಳನ್ನು ತಯಾರಿಸಲಾಯಿತು ಹಾಗೂ ಇಲಾಖೆಯು ಸಮೀಕ್ಷೆಯ ವೇಳೆಯಲ್ಲಿ 2,596 ಗ್ರಾಮಗಳಲ್ಲಿ 9,552 ಸ್ಮಾರಕಗಳನ್ನು ಗುರುತಿಸಿತು.

ಯೋಜನೆಯನ್ನು ಕಾರ್ಯಗತಗೊಳಿಸಿದ ಮುಂಚಿನ ಅವಧಿಯಲ್ಲಿ ಇಲಾಖೆಯು ಸಂರಕ್ಷಣೆ ಮತ್ತು ಸುರಕ್ಷತೆಗಾಗಿ ಸ್ಮಾರಕಗಳ ಗುರುತಿಸುವಿಕೆಗಾಗಿ ಯಾವುದೇ ಸಮೀಕ್ಷಾ ಕಾಮಗಾರಿಗಳನ್ನು ಪೂರ್ವಭಾವಿಯಾಗಿ ಯೋಜಿಸಿರಲಿಲ್ಲ ಅಥವಾ ಅವುಗಳನ್ನು ನಡೆಸಿರಲಿಲ್ಲ. 2019ಕ್ಕೆ ಮುಂಚಿನ ಅವಧಿಯಲ್ಲಿ ಸಮೀಕ್ಷಾ ಕಾರ್ಯಗಳನ್ನು ನಡೆಸಿಕೊಂಡು ಹೋಗದಿರಲು ಕಾರಣಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ.

ಮುಂದುವರೆದು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ಹಂತವಾರು ಸಮೀಕ್ಷೆಯನ್ನು ಪೂರ್ಣಗೊಳಿಸುವ ಸಲುವಾಗಿ ಇಲಾಖೆಯು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರಲಿಲ್ಲ ಎಂಬುದನ್ನು ಲೆಕ್ಕ ಪರಿಶೋಧನೆ ಗಮನಿಸಿದೆ. ಐತಿಹಾಸಿಕ ಪ್ರಾಮುಖ್ಯತೆ ಅಥವಾ ಪುರಾತತ್ವ ಶಾಸ್ತ್ರೀಯ ಮೌಲ್ಯಗಳ ಆಧಾರದ ಮೇರೆಗೆ ತಾಲ್ಲೂಕುಗಳಿಗೆ ಆದ್ಯತೆಯನ್ನು ನೀಡಿರಲಿಲ್ಲ.

ಮುಂದುವರೆದು 19 ತಾಲ್ಲೂಕುಗಳಲ್ಲಿ 9,552 ಸಂರಕ್ಷಿಸಿರದ ಪ್ರಾಚೀನ ಸ್ಮಾರಕಗಳನ್ನು ಗುರುತಿಸಿದಂತಹ ಸಮೀಕ್ಷಾ ವರದಿಗಳನ್ನು ಸಲ್ಲಿಸಿದನಂತರ ಕರ್ನಾಟಕ ಸರ್ಕಾರ / ಇಲಾಖೆಯು ಗ್ರಾಮ ಸಮೀಕ್ಷೆಯ ವೇಳೆಯಲ್ಲಿ ಗುರುತಿಸಲಾಗಿದ್ದಂತಹ ಸ್ಮಾರಕಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಗಳನ್ನು ಹೊರಡಿಸಿರಲಿಲ್ಲ. ಅಂತಹ ಸಂರಕ್ಷಿಸಿರದ ಕೆಲವು ಪ್ರಾಚೀನ ಸ್ಮಾರಕಗಳ ಸ್ಥಿತಿಗತಿಗಳನ್ನು ಈ ಕೆಳಗೆ ಚಿತ್ರಿಸಲಾಗಿದೆ.



**ಛಾಯಚಿತ್ರ ಸಂಖ್ಯೆ 3.1: ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನಲ್ಲಿ ಸಮೀಕ್ಷೆಯ ವೇಳೆಯಲ್ಲಿ ಗುರುತಿಸಲಾದಂತಹ ಒಂದು ಸಂರಕ್ಷಿಸಿರದ ಪ್ರಾಚೀನ ಸ್ಮಾರಕವು ಶಿಥಿಲಾವಸ್ಥೆಯಲ್ಲಿರುವುದು.**

---

[11] 2020ರಲ್ಲಿ ಮೈಸೂರು ತಾಲ್ಲೂಕಿನಲ್ಲಿ ಪ್ರಾಯೋಗಿಕ ಯೋಜನೆಗೆ ಖರ್ಚು ಮಾಡಲಾದ ₹ 0.40 ಲಕ್ಷವನ್ನು ಒಳಗೊಂಡಿದೆ.

[12] **2019–20**: ಮೈಸೂರು ತಾಲ್ಲೂಕು, **2020–21:** ಹಾಸನ, ಕಿತ್ತೂರು, ಶಿಕಾರಿಪುರ, ಚಿಕ್ಕಬಳ್ಳಾಪುರ, ಕಲಬುರಗಿ ತಾಲ್ಲೂಕುಗಳು, **2021–22:**ಸವಣೂರು (ಹಾವೇರಿ), ಮಂಗಳೂರು (ದಕ್ಷಿಣ ಕನ್ನಡ), ಬೆಂಗಳೂರು, ಮಡಕೇರಿ, ಆಲೂರು (ಹಾಸನ), ಹಿರಿಯೂರು (ಚಿತ್ರದುರ್ಗ), ಕಮಲಾಪುರ (ಕಲಬುರಗಿ), ಕೊಟ್ಟೂರು (ವಿಜಯನಗರ), ಬೈಲಹೊಂಗಲ, ರಾಯಚೂರು, ನಂಜನಗೂಡು, ಶ್ರೀರಂಗಪಟ್ಟಣ ಮತ್ತು ಟಿ. ನರಸೀಪುರ.



**ಛಾಯಚಿತ್ರ ಸಂಖ್ಯೆ 3.2: ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನಲ್ಲಿ ಸಮೀಕ್ಷೆಯ ವೇಳೆಯಲ್ಲಿ ಗುರುತಿಸಲಾದಂತಹ ಒಂದು ಸಂರಕ್ಷಿಸಿರದ ಪ್ರಾಚೀನ ಸ್ಮಾರಕವು ಪಾಳು ಬಿದ್ದಿರುವುದು.**

ಈ ರೀತಿಯಾಗಿ ಸಂರಕ್ಷಿಸಿರದ ಪ್ರಾಚೀನ ಸ್ಮಾರಕಗಳ ಗುರುತಿಸುವಿಕೆಯಲ್ಲಿನ ವಿಳಂಬ ಹಾಗೂ ಅಧಿಸೂಚನೆಯನ್ನು ಹೊರಡಿಸುವಲ್ಲಿನ ಕೊರತೆಯು ಅವುಗಳ ಶಿಥಿಲಾವಸ್ಥೆಯನ್ನು ಇನ್ನೂ ಉಲ್ಬಣಗೊಳಿಸಿರುವವು. ಇದು ಇಲಾಖೆಯಲ್ಲಿನ ಅನುಸರಣಾ ಕ್ರಮಗಳ ಕೊರತೆಯನ್ನು ಸೂಚಿಸುತ್ತಿದ್ದಿತು.

ಆಯವ್ಯಯ ಹಂಚಿಕೆಯ ಆಧಾರದ ಮೇರೆಗೆ ಪ್ರಾಚೀನಾವಶೇಷಗಳನ್ನು ಹಾಗೂ ಸಂರಕ್ಷಿಸಿರದ ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಣೆ ಯೋಜನೆಯ ಅಡಿಯಲ್ಲಿ ಗುರುತಿಸುವುದಕ್ಕೆ ಆದ್ಯತೆಯನ್ನು ನೀಡಲಾಗುವುದು ಹಾಗೂ ಸಂರಕ್ಷಿತ ಪ್ರಾಚೀನ ಸ್ಮಾರಕಗಳು ಎಂಬುದಾಗಿ ಘೋಷಿಸುವ ಮೊದಲು ರಕ್ಷಣೆ ಸುರಕ್ಷತೆ ಮತ್ತು ಸಂರಕ್ಷಣೆಗಾಗಿ ಕೈಗೆತ್ತಿಕೊಳ್ಳಲಾಗುವುದು ಎಂದು ಸರ್ಕಾರವು ಉತ್ತರಿಸಿತು (ಆಗಸ್ಟ್ 2023). ಈಗಾಗಲೇ ಅಧಿಸೂಚಿತ ಸ್ಮಾರಕಗಳ ಸುರಕ್ಷತೆ, ಸಂರಕ್ಷಣೆ ಮತ್ತು ರಕ್ಷಣೆಗೆ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬುದು ವಾಸ್ತವವಾಗಿ ಉಳಿದಿದೆ

### *ಉತ್ಖನನ*

**3.3** ಪುರಾತತ್ವ ಉತ್ಖನನ ಎಂದರೆ ಪುರಾತತ್ವ ಶಾಸ್ತ್ರೀಯ ವೈಲಕ್ಷಣಗಳ ವಸ್ತುಗಳನ್ನು ಪತ್ತೆಹಚ್ಚುವ ಗುರಿಯನ್ನು ಹೊಂದಿರುವಂತಹ ಯಾವುದೇ ಸಂಶೋಧನೆ, ಇದು ನೆಲವನ್ನು ಅಗೆಯುವುದು ಅಥವಾ ಅದರ ಮೇಲ್ಮೈಯ ಅಥವಾ ಭೂತಳದಲ್ಲಿ ಅಥವಾ ಒಂದು ದ್ವೀಪದ ಉಪಮಣ್ಣಿನಲ್ಲಿ ಅಥವಾ ಪ್ರಾಂತೀಯ ನೀರುಗಳಲ್ಲಿ ನಡೆಸಲಾಗುವ ವ್ಯವಸ್ಥಿತ ಪರಿಶೋಧನೆ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಶಾಸ್ತ್ರೀಯ ನಿವೇಶನಗಳು ಮತ್ತು ಪಳೆಯುಳಿಕೆಗಳ ಅಧಿನಿಯಮದ 1958ರ (ಕೇಂದ್ರ ಅಧಿನಿಯಮ) ಪರಿಚ್ಛೇದಗಳು 21 ರಿಂದ 24ರ ಅನುಸಾರ ರಾಜ್ಯ ಸರ್ಕಾರವು ಯಾವುದೇ ಪುರಾತತ್ವ ಸಂಶೋಧನೆಗಳನ್ನು ನಡೆಸುವ ಮೊದಲು ಕೇಂದ್ರ ಸರ್ಕಾರದ (ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆ) ಇಲಾಖೆಯ ಪೂರ್ವಾನುಮತಿಯ ಅಗತ್ಯತೆ ಇರುತ್ತದೆ.

ಇಲಾಖೆಯು ಸಾಮಾನ್ಯವಾಗಿ ಸಂಶೋಧನಾ ಕಾಮಗಾರಿಗಳನ್ನು ಆಯವ್ಯಯ ಹಂಚಿಕೆಯ ನಂತರ ತಯಾರಿಸಲಾಗುತ್ತಿದ್ದಂತಹ ವಾರ್ಷಿಕ ಕ್ರಿಯಾ ಯೋಜನೆಗಳಲ್ಲಿ ತಿಳಿಸಲಾಗಿರುವಂತಹ ಸ್ಥಳಗಳಲ್ಲಿ ನಡೆಸಿಕೊಂಡು ಹೋಗಿರುವುದು. ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು.

- ಪುರಾತತ್ವ, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ವಾರ್ಷಿಕ ಕ್ರಿಯಾ ಯೋಜನೆಗಳಲ್ಲಿ ಉತ್ಖನನ ನಿವೇಶನಗಳ ಆಯ್ಕೆಗಾಗಿ ಯಾವುದೇ ನಿರ್ದಿಷ್ಟ ಕಾರ್ಯವಿಧಾನಗಳು ಅಥವಾ ಮಾರ್ಗಸೂಚಿಗಳನ್ನು ಹೊಂದಿರಲಿಲ್ಲ.

- ಒಂದು ನಿರ್ದಿಷ್ಟ ಕಾಲಾವಧಿಯ ಒಳಗೆ ಉತ್ಖನನ ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಲುವಾಗಿ ಯಾವುದೇ ಆದ್ಯತೆಯ ಪಟ್ಟಿ ಅಥವಾ ಪೂರ್ವಭಾವಿ ಯೋಜನೆಗಳು ಇರಲಿಲ್ಲ.

2017–18 ರಿಂದ 2021–22ರ ಅವಧಿಯಲ್ಲಿ ಇಲಾಖೆಯು ಕೈಗೆತ್ತಿಕೊಂಡಂತಹ ಪರಿಶೋಧನಾ ಕಾಮಗಾರಿಗಳಿಗಾಗಿ ಆಯವ್ಯಯ ಹಂಚಿಕೆ ಮತ್ತು ವೆಚ್ಚಗಳ ವಿವರಗಳು ಈ ಕೆಳಗಿನಂತಿರುವವು.

**ಕೋಷ್ಟಕ ಸಂಖ್ಯೆ 3.1: ಪರಿಶೋಧನಾ ಕಾಮಗಾರಿಗಳಿಗಾಗಿ ಆಯವ್ಯಯ ಹಂಚಿಕೆ ಮತ್ತು ವೆಚ್ಚಗಳ ವಿವರಗಳು**

| ಕ್ರಮ ಸಂಖ್ಯೆ | ವರ್ಷ | ಪರಿಶೋಧನಾ ಕಾಮಗಾರಿಯ ಹೆಸರು | ಆಯವ್ಯಯ (₹ ಲಕ್ಷಗಳಲ್ಲಿ) | ವೆಚ್ಚ (₹ ಲಕ್ಷಗಳಲ್ಲಿ) | ಶೇಕಡವಾರು |
|---|---|---|---|---|---|
| 1 | 2017–18 | ಯಾವುದೂ ಇರುವುದಿಲ್ಲ | 5.00 | 0.00 | 0 |
| 2 | 2018–19 | ತಲಕಾಡು (ಮರಳು ರಾಶಿಗಳು), ಮೈಸೂರು ಜಿಲ್ಲೆ<br>ಎನ್‌ಎಂಕ್ಯೂ ಪ್ರದೇಶ– ಹಂಪಿ ವಿಜಯನಗರ ಜಿಲ್ಲೆ | 5.00 | 7.82 | 156 |
| 3 | 2019–20 | ತಲಕಾಡು (ಮರಳು ರಾಶಿಗಳು), ಮೈಸೂರು ಜಿಲ್ಲೆ | 15.00 | 5.78 | 39 |
| 4 | 2020–21 | ಎನ್‌ಎಂಕ್ಯೂ ಪ್ರದೇಶ– ಹಂಪಿ ವಿಜಯನಗರ ಜಿಲ್ಲೆ | 5.00 | 0.30 | 6 |
| 5 | 2021–22 | ಯಾವುದೂ ಇರುವುದಿಲ್ಲ | 5.00 | 0.00 | 0 |
| | **ಒಟ್ಟು** | | **35.00** | **13.90** | **39.71** |

**(ಮೂಲ ಇಲಾಖೆಯು ಒದಗಿಸಿದ ಮಾಹಿತಿ)**

- ಹಂಪಿ, ತಲಕಾಡು, ಕಲ್ಯಾ, ಮಣ್ಣಿ, ಇಕ್ಕೇರಿ ಮತ್ತು ರಾಜಘಟ್ಟ ನಿವೇಶನಗಳಲ್ಲಿ ಉತ್ಖನನ ಕಾಮಗಾರಿಗಳನ್ನು ನಡೆಸುವ ಸಲುವಾಗಿ 2017–18ರಿಂದ 2021–22ರ ಅವಧಿಯಲ್ಲಿ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿದ್ದಿತು ₹ 35.00 ಲಕ್ಷ ಮೊತ್ತದಷ್ಟು ಒಂದು ಆಯವ್ಯಯ ಅನುವನ್ನು ಮಾಡಲಾಗಿದ್ದಿತು ಇದರ ಪೈಕಿ ₹ 13.90 ಲಕ್ಷವನ್ನು ಭರಿಸಲಾಗಿದ್ದಿತು (ಶೇಕಡ 39.71). ಸಮರ್ಪಕ ಆಯವ್ಯಯ ಅನುವು ಇದ್ದಾಗ್ಯೂ ಇಲಾಖೆಯು 2017–18 ಮತ್ತು 2021–22 ಸಾಲುಗಳಲ್ಲಿ ಸ್ಥಳಗಳನ್ನು ಗುರುತಿಸುವ ಹಾಗೂ ಉತ್ಖನನ ಕಾಮಗಾರಿಗಳನ್ನು ನಡೆಸುವಲ್ಲಿ ವಿಫಲಗೊಂಡಿದ್ದಿತು. ಲಭ್ಯವಿರುವ ಹಣಕಾಸನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳದೆಯೇ ಇರಲು ಕಾರಣಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ.

ತಲಕಾಡು ಮರಳು ರಾಶಿಗಳಿಗೆ ಹೆಸರುವಾಸಿಯಾಗಿದ್ದು ದಕ್ಷಿಣ ಭಾರತದಲ್ಲಿ ಒಂದು ವಿರಳ ಸ್ಥಳವಾಗಿರುತ್ತದೆ. ತಲಕಾಡು 8ನೇ ಶತಮಾನದಲ್ಲಿ ಆಳಿದ ಗಂಗರ ರಾಜಧಾನಿಯಾಗಿದ್ದಿತು. ಒಂದನೇ ರಾಜ ರಾಜ ಚೋಳ ತಲಕಾಡನ್ನು ವಶಪಡಿಸಿಕೊಂಡನು ಹಾಗೂ ಅದಕ್ಕೆ ರಾಜರಾಜಪುರ ಎಂಬುದಾಗಿ ನಾಮಕರಣ ಮಾಡಿದನು. ಹೆಸರಾಂತ ಹೊಯ್ಸಳ ರಾಜನಾಗಿದ್ದ ವಿಷ್ಣುವರ್ಧನನು ಅದನ್ನು ಚೋಳರಿಂದ ವಶಪಡಿಸಿಕೊಂಡನು ಹಾಗೂ ಅದಕ್ಕೆ ತಲಕಾಡುಗೊಂಡ ಎಂಬುದಾಗಿ ಮರು–ನಾಮಕರಣ ಮಾಡಿದನು. ತಲಕಾಡನ್ನು ವಿಜಯನಗರ ಸಾಮ್ರಾಟರು ಹಾಗೂ ಮೈಸೂರಿನ ಒಡೆಯರುಗಳು ಆಳಿದ್ದರು. 17ನೇ ಶತಮಾನದಲ್ಲಿ ಒಂದು ವಿಸ್ಮಯಕಾರಿ ಪ್ರಾಕೃತಿಕ ವಿಕೋಪದ ಕಾರಣ ಸಂಪೂರ್ಣ ಪ್ರಾಚೀನ ಪಟ್ಟಣವು ಗಾಳಿಯಿಂದ ತೂರಿಬಂದತಹ ಮರಳಿನಲ್ಲಿ ಮುಳುಗಡೆಯಾಗಿದ್ದಿತು.




**ಛಾಯಾಚಿತ್ರ ಸಂಖ್ಯೆ.3.3: ತಲಕಾಡಿನ ಮರಳು ರಾಶಿಗಳು**

- ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯು (ಎಎಸ್ಐ) ಇಲಾಖೆಯು ಸಲ್ಲಿಸಿದ (ಜುಲೈ–2018) ಒಂದು ಪ್ರಸ್ತಾವನೆಯ ಆಧಾರದ ಮೇರೆಗೆ ಅಕ್ಟೋಬರ್–2018ರಲ್ಲಿ ಅನುಮೋಧನೆಯನ್ನು ನೀಡುವ ವೇಳೆಯಲ್ಲಿ ಕೆಲವು ಷರತ್ತುಗಳನ್ನು ನಿರ್ಧಿಷ್ಟಪಡಿಸಿತು, ಅದರ ಅನುಸಾರ ಇಲಾಖೆಯು ಸಂಬಂಧಿತ ವಿಭಾಗೀಯ ರೇಖಾ ಚಿತ್ರಗಳು, ಶಿಲಾಪದರಗಳ ಅಧ್ಯಯನ (ಸ್ಟ್ರಾಟೀಗ್ರಫಿ)[13] ಹಾಗೂ ಕಂಡುಬಂದಿರುವಂತಹ ಪ್ರಮುಖ ಅಂಶಗಳನ್ನು ಒಳಗೊಂಡಂತೆ ಕೈಗೊಳ್ಳಲಾಗಿರುವ ಕಾಮಗಾರಿಗಳ ವಾರ್ಷಿಕ ಮಧ್ಯಂತರ ವರದಿಯನ್ನು ಸಲ್ಲಿಸಬೇಕಿದ್ದಿತು. ಇಲಾಖೆಯು ನವೆಂಬರ್–2022ರವರೆವಿಗೂ ಅದನ್ನು ತಯಾರಿಸಿರಲಿಲಲ್ಲ / ಸಲ್ಲಿಸಿರಲಿಲ್ಲ.

ಉತ್ಖನನ ಸ್ಥಳಗಳ ಆದ್ಯತೆ ಮತ್ತು ಕಾಲಮಿತಿಯೊಳಗೆ ಕಾರ್ಯಗಳನ್ನು ಪೂರ್ಣಗೊಳಿಸಲು ಇಲಾಖೆಯು ಯಾವುದೇ ನಿಗದಿತ ಕಾರ್ಯವಿಧಾನವನ್ನು ಹೊಂದಿರಲಿಲ್ಲ

**ಶಿಫಾರಸ್ಸು 4:**

**ಸರ್ಕಾರವು ಪುರಾತತ್ವ ಸ್ಮಾರಕಗಳ ಪರಿಶೋಧನೆಗಾಗಿ ಒಂದು ನಿರ್ಧಿಷ್ಟ ಕಾರ್ಯ ನೀತಿಯನ್ನು ರೂಪಿಸಬೇಕು. ಮುಂದುವರೆದು ಉತ್ಖನನ ಕಾಮಗಾರಿಗಳು ಇತ್ಯಾದಿಗಳನ್ನು ಆದ್ಯತೆಗೊಳಿಸುವ ಸಲುವಾಗಿ ಹಾಗೂ ಕಂಡುಬಂದಿರುವಂತಹ ಅಂಶಗಳನ್ನು ವರದಿ ಮಾಡುವ ಸಲುವಾಗಿ ಒಂದು ಸೂಕ್ತ ವ್ಯವಸ್ಥೆಯನ್ನು ರೂಪಿಸಬೇಕು.**

***ಸಂರಕ್ಷಿತ ಸ್ಮಾರಕಗಳ ನಿಖರವಾದಂತಹ ಪಟ್ಟಿಯ ಅನುಪಸ್ಥಿತಿ***

**3.4** ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಶಾಸ್ತ್ರೀಯ ನಿವೇಶನ ಮತ್ತು ಪಳಯುಳಿಕೆಗಳ ವ್ಯಾಪ್ತಿಯನ್ನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವಶಾಸ್ತ್ರೀಯ

[13] ಪುರಾತತ್ವ ಸ್ಮಾರಕಗಳ ಶಿಲಾಪದರಗಳ ಅನುಕ್ರಮಣಿಕೆ ಮತ್ತು ಸ್ಥಿತಿಗತಿಗಳ ವಿಶ್ಲೇಷಣೆ.

ನಿವೇಶನಗಳು ಮತ್ತು ಪಳೆಯುಳಿಕೆಗಳ ಅಧಿನಿಯಮ 1961ರ(ಅಧಿನಿಯಮ) ಪರಿಚ್ಛೇದ 2(1)[14] ಮತ್ತು 2(3)[15] ವಿವರಿಸಿರುತ್ತವೆ. ಅಧಿನಿಯಮದ ಪರಿಚ್ಛೇದ 3 ಈ ಹಿಂದಿನ ಅಧಿನಿಯಮಗಳಿಂದ ಘೋಷಿಸಲ್ಪಟ್ಟಿರುವಂತಹ ಆದರೆ ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಹೊಂದಿರುವುದಾಗಿ ಲೋಕಸಭೆಯಿಂದ ಕಾನೂನಿನ ಅಡಿಯಲ್ಲಿ ಘೋಷಿಸಿರದ ಎಲ್ಲಾ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಎಲ್ಲಾ ಪುರಾತತ್ವ ಶಾಸ್ತ್ರೀಯ ನಿವೇಶನಗಳು ಮತ್ತು ಪಳೆಯುಳಿಕೆಗಳನ್ನು ಸಂರಕ್ಷಿತ ಸ್ಮಾರಕಗಳು ಅಥವಾ ಸಂರಕ್ಷಿತ ಪ್ರದೇಶಗಳು ಇವುಗಳಲ್ಲಿ ಯಾವುದು ಅನ್ವಯವೋ ಅವುಗಳು ಎಂಬುದಾಗಿ ಭಾವಿಸತಕ್ಕದ್ದು ಎಂಬುದಾಗಿ ಘೋಷಿಸಿರುವುದು. ಒಂದು ಸಂರಕ್ಷಿತ ಸ್ಮಾರಕ ಎಂಬುದಾಗಿ ಘೋಷಿಸತಕ್ಕದ್ದು ಎಂಬುದಾಗಿ ರಾಜ್ಯ ಸರ್ಕಾರವು ಅಭಿಪ್ರಾಯ ಪಡುವಂತಹ ಯಾವುದೇ ಸ್ಮಾರಕಗಳನ್ನು ಪ್ರಾಚೀನ ಸ್ಮಾರಕಗಳು ಎಂಬುದಾಗಿ ಘೋಷಿಸಲು ಅಧಿನಿಯಮದ ಪರಿಚ್ಛೇದ 4 ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡಿರುವುದು.

31 ಮಾರ್ಚ್ 2022ರಲ್ಲಿದ್ದಂತೆ ಇಲಾಖೆಯು ರಾಜ್ಯದಿಂದ ಸಂರಕ್ಷಿಸಲ್ಪಟ್ಟಿದ್ದಂತಹ 844 ಸ್ಮಾರಕಗಳನ್ನು ಹೊಂದಿದ್ದಿತು ಹಾಗೂ ಅವುಗಳು 30 ಜಿಲ್ಲೆಗಳಲ್ಲಿ[16] ವ್ಯಾಪಿಸಿದ್ದವು. ನಿವೇಶನದ ಸ್ಥಳ, ನಿವೇಶನದ ವಿವರಣೆ, ನಿವೇಶನದ ಪ್ರಾಮುಖ್ಯತೆ ಪುನರ್–ಸ್ಥಾಪನೆ, ಸ್ಥಿರತೆ ಮತ್ತು ಕಾಲಾನುಕಾಲಕ್ಕೆ ಸಂರಕ್ಷಣಾ ಕಾಮಗಾರಿಗಳನ್ನು ನಿರ್ವಹಿಸಿರುವುದು ಮುಂತಾದ ಪಾರಂಪರಿಕ ನಿರ್ವಹಣಾ ಶಿಫಾರಸ್ಸು ಮುಂತಾದ ವಿವರಗಳನ್ನು ವಿವರಿಸುವಂತಹ ಒಂದು ನಿಖರವಾದಂತಹ ಪಟ್ಟಿ ಅಥವಾ ಡೈರೆಕ್ಟರಿಯನ್ನು ನಿರ್ವಹಿಸಿದ್ದಲ್ಲಿ ಈ ಸ್ಮಾರಕಗಳ ಸುರಕ್ಷತೆ ಮತ್ತು ಸಂರಕ್ಷಣೆಯನ್ನು ಪರಿಣಾಮಕಾರಿತ್ವದಿಂದ ಕೈಗೊಳ್ಳಬಹುದು.

ನಿರ್ದೇಶಿಕೆ ಅಥವಾ ಡೈರೆಕ್ಟರಿಯ ನಿರ್ವಹಣೆಯಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಸಮಂಜಸತೆಗಳನ್ನು ಗಮನಿಸಿತು.

- ಇಲಾಖೆಯು ಮಾರ್ಚ್ 2022ರಲ್ಲಿದ್ದಂತೆ ರಾಜ್ಯದಿಂದ 844 ಸ್ಮಾರಕಗಳನ್ನು ಸಂರಕ್ಷಿಸಿರುವುದಾಗಿ ತೋರಿಸಿದ್ದಿತಾದರೂ ಲೆಕ್ಕಪರಿಶೋಧನೆಯು ಲೆಕ್ಕ ಹಾಕಿದಂತೆ ನಿರ್ದೇಶಿಕೆಯಲ್ಲಿ 848 ಸ್ಮಾರಕಗಳಿದ್ದವು ಈ ವ್ಯತ್ಯಾಸವು ಬಳ್ಳಾರಿ (+1) ಧಾರವಾಡ (+1) ಹಾಸನ (+2) ಮಂಡ್ಯ (+1) ಹಾಗೂ ತುಮಕೂರು (–1) ಗಳಲ್ಲಾದ ಎಣಿಕೆಯಲ್ಲಿನ ತಪ್ಪುಗಳಿಂದ ಆಗಿತ್ತು.

- ಸ್ಮಾರಕಗಳ ನಿರ್ದೇಶಿಕೆಯು 561 ಸಂಖ್ಯೆಗಳಷ್ಟು ರಾಜ್ಯ ಸಂರಕ್ಷಿತ ಸ್ಮಾರಕಗಳಿಗೆ ರಾಜ್ಯ ಸರ್ಕಾರದಿಂದ ನೀಡಲಾಗಿರುವ ಅಧಿಸೂಚನೆಯ ವಿವರಗಳನ್ನು ಒಳಗೊಂಡಿರಲಿಲ್ಲ.

---

[14] "ಪ್ರಾಚೀನ ಸ್ಮಾರಕ ಎಂದರೆ ಯಾವುದೇ ನಿರ್ಮಾಣ, ಸ್ಥಾಪಿಸಿರುವಿಕೆಗಳು ಅಥವಾ ಸ್ಮಾರಕ ಅಥವಾ ಯಾವುದೇ ಸಮಾಧಿ ಅಥವಾ ಗೋರಿ ದಿಬ್ಬ ಅಥವಾ ಸಂಪ್ರದಾಯಾನುಸಾರದ ಶವ ಸಮಾಧಿ ಅಥವಾ ಯಾವುದೇ ಗುಹೆ, ಬಂಡೆ – ಕೆತ್ತನೆ, ಐತಿಹಾಸಿಕ, ಪುರಾತತ್ವಶಾಸ್ತ್ರೀಯ ಅಥವಾ ಕಲಾತ್ಮಕ ಆಸಕ್ತಿಯನ್ನು ಹೊಂದಿರುವಂತಹ ಹಾಗೂ ಒಂದು ನೂರು ವರ್ಷಗಳಿಗೂ ಕಡಿಮೆ ಇಲ್ಲದ ಅವಧಿಗೆ ಇರುವಂತಹ ಶಿಲಾಶಾಸನಗಳು ಅಥವಾ ಅಖಂಡ ಅಥವಾ ಏಕ ಶಿಲೆಗಳಾಗಿರುತ್ತವೆ, ಹಾಗೂ ಇವುಗಳು (i) ಪ್ರಾಚೀನ ಸ್ಮಾರಕದ ಅವಶೇಷಗಳು, (ii) ಪ್ರಾಚೀನ ಸ್ಮಾರಕಗಳ ನಿವೇಶನಗಳು, (iii) ಅಂತಹ ಸ್ಮಾರಕಗಳಿಗೆ ಬೇಲಿ ಹಾಕುವ ಸಲುವಾಗಿ ಅವುಗಳನ್ನು ವ್ಯಾಪಿಸುವ ಸಲುವಾಗಿ ಅಥವಾ ಅನ್ಯಥಾ ಸಂರಕ್ಷಿಸುವ ಸಲುವಾಗಿ ಅಗತ್ಯವಿರುವಂತಹ ಭೂ ಭಾಗ, ಹಾಗೂ (iv) ಒಂದು ಪ್ರಾಚೀನ ಸ್ಮಾರಕದ ಪ್ರವೇಶಕ್ಕೆ ಹಾಗೂ ಸೂಕ್ತ ಪರೀಕ್ಷಣೆಗೆ ಹೋಗುವ ಸಲುವಾಗಿನ ಮಾರ್ಗವನ್ನು ಒಳಗೊಂಡಿರುತ್ತದೆ."

[15] "ಪುರಾತತ್ವ ನಿವೇಶನ ಮತ್ತು ಪಳೆಯುಳಿಕೆಗಳು" ಎಂದರೆ ನೂರು ವರ್ಷಗಳಿಗೂ ಕಡಿಮೆ ಇಲ್ಲದ ಅವಧಿಯಿಂದ ಇರುವಂತಹ ಐತಿಹಾಸಿಕ ಅಥವಾ ಪುರಾತತ್ವ ಪ್ರಾಮುಖ್ಯತೆಯ ಪಳೆಯುಳಿಕೆಗಳು ಅಥವಾ ಕುರುಹುಗಳನ್ನು ಒಳಗೊಂಡಿರುವುದಾಗಿ ನಂಬಿಕೆಯನ್ನು ಹೊಂದಿರುವಂತಹ ಯಾವುದೇ ಪ್ರದೇಶ, ಇವುಗಳು (i) ಅಂತಹ ಸ್ಮಾರಕಗಳಿಗೆ ಬೇಲಿ ಹಾಕುವ ಸಲುವಾಗಿ ಅವುಗಳನ್ನು ವ್ಯಾಪಿಸುವ ಸಲುವಾಗಿ ಅಥವಾ ಅನ್ಯಥಾ ಸಂರಕ್ಷಿಸುವ ಸಲುವಾಗಿ ಅಗತ್ಯವಿರುವಂತಹ ಭೂ ಭಾಗ, ಹಾಗೂ (ii) ಒಂದು ಪ್ರಾಚೀನ ಸ್ಮಾರಕದ ಪ್ರವೇಶಕ್ಕೆ ಹಾಗೂ ಸೂಕ್ತ ಪರೀಕ್ಷಣೆಗೆ ಹೋಗುವ ಸಲುವಾಗಿನ ಮಾರ್ಗವನ್ನು ಒಳಗೊಂಡಿರುತ್ತದೆ".

[16] ವಿಜಯನಗರ ಜಿಲ್ಲೆಯನ್ನು 02 ಅಕ್ಟೋಬರ್ 2021ರಂದು ಘೋಷಿಸಲಾಗಿದ್ದು, ಅದು ಒಳಗೊಂಡಿರುವುದಿಲ್ಲ.

- 1947ಕ್ಕೆ ಮುಂಚಿನ ಅವಧಿಯಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದತಂಹ 113 ಸ್ಮಾರಕಗಳಿದ್ದವು. ಸ್ವಾಂತತ್ರ್ಯ ನಂತರದ ಅವಧಿಯಲ್ಲಿ ಸರ್ಕಾರವು 178 ಸ್ಮಾರಕಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿದ್ದಿತು. ಸರ್ಕಾರವು ಹೊರಡಿಸಿದ್ದಂತಹ ದಶಕವಾರು ಅಧಿಸೂಚನೆಗಳ ವಿವರಗಳು ಈ ಕೆಳಗಿನಂತಿರುವವು:

**ಕೋಷ್ಟಕ ಸಂಖ್ಯೆ 3.2: ಸರ್ಕಾರವು ಹೊರಡಿಸಿದ್ದಂತಹ ದಶಕವಾರು ಅಧಿಸೂಚನೆಗಳ ವಿವರಗಳು.**

| ಕ್ರಮ ಸಂಖ್ಯೆ | ಅವಧಿ | ನೀಡಲಾಗಿರುವ ಅಧಿಸೂಚನೆಗಳ ಸಂಖ್ಯೆ |
|---|---|---|
| 1 | 1947 ರಿಂದ 1949 | 0 |
| 2 | 1950 ರಿಂದ 1959 | 1 |
| 3 | 1960 ರಿಂದ 1969 | 26 |
| 4 | 1970 ರಿಂದ 1979 | 2 |
| 5 | 1980 ರಿಂದ 1989 | 8 |
| 6 | 1990 ರಿಂದ 1999 | 47 |
| 7 | 2000 ರಿಂದ 2009 | 2 |
| 8 | 2010 ರಿಂದ 2019 | 86 |
| 9 | 2020 ರಿಂದ 2022 | 6 |
| | **ಒಟ್ಟು** | **178** |

**ಮೂಲ: ಇಲಾಖೆಯು ಒದಗಿಸಿರುವ ಮಾಹಿತಿಯಿಂದ ಸಂಕಲನಗೊಳಿಸಿರುವುದು**

ಒಂಬತ್ತು ದಶಕಗಳಲ್ಲಿ ಅಂದರೆ 1947 ರಿಂದ 2022ರ ಅವಧಿಯಲ್ಲಿ ಕೇವಲ 178 ಸ್ಮಾರಕಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿರುವ ವಾಸ್ತವಾಂಶವು, ಅವುಗಳ ಸಂರಕ್ಷಣೆಗಾಗಿ ಸ್ಮಾರಕಗಳನ್ನು ಗುರುತಿಸುವಿಕೆ ಮತ್ತು ಅಧಿಸೂಚನೆ ಹೊರಡಿಸುವಿಕೆಯನ್ನು ಸರ್ಕಾರ/ಇಲಾಖೆ ಆದ್ಯತೆಗೊಳಿಸಿರುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ಸಂರಕ್ಷಣೆ ಯೋಜನೆಯಡಿಯಲ್ಲಿ 19 ತಾಲ್ಲೂಕುಗಳಲ್ಲಿ ಗುರುತಿಸಲ್ಪಟ್ಟಿರುವಂತಹ 9,552 ಸ್ಮಾರಕಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಗಳನ್ನು ಇನ್ನೂ ಹೊರಡಿಸಬೇಕಾಗಿದೆ. (***ಕಂಡಿಕೆ 3.2ರಲ್ಲಿ*** ಚರ್ಚಿಸಿರುವಂತೆ)

- ಇಲಾಖೆಯು ನಿರ್ವಹಿಸಿರುವ ಸ್ಮಾರಕಗಳ ನಿರ್ದೇಶಿಕೆಯು 2021–22ರಲ್ಲಿ ಅಧಿಸೂಚನೆ ಹೊರಡಿಸಲ್ಪಟ್ಟಿರುವ ಚಾಮರಾಜನಗರ ಜಿಲ್ಲೆಯ 4 ಸ್ಮಾರಕಗಳನ್ನು ಒಳಗೊಂಡಿರುವುದಿಲ್ಲ.

ನಿರ್ದೇಶಿಕೆಯಲ್ಲಿ ಸೇರಿಸಲ್ಪಟ್ಟಿರದ ಸ್ಮಾರಕಗಳ ಕೆಲವು ಛಾಯಚಿತ್ರಗಳನ್ನು ಈ ಕೆಳಗೆ ನೀಡಲಾಗಿದೆ.



**ಛಾಯಾಚಿತ್ರ ಸಂಖ್ಯೆ 3.4: ಚೋಳರ ಅವಧಿಗೆ ಸಂಬಂಧಿಸಿರುವಂತಹ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಅಗರ ಗ್ರಾಮ, ಯಳಂದೂರು ತಾಲ್ಲೂಕು, ಚಾಮರಜನಗರ ಜಿಲ್ಲೆ**



**ಛಾಯಾಚಿತ್ರ ಸಂಖ್ಯೆ 3.5: ಚೋಳರ ಅವಧಿಗೆ ಸಂಬಂಧಿಸಿರುವಂತಹ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ತ್ರಿಯಂಬಕಪುರದ ಶ್ರೀ ತ್ರಿಯಂಬಕೇಶ್ವರ ದೇವಸ್ಥಾನ**

- ಲೆಕ್ಕಪರಿಶೋಧನೆಯು ಜಂಟಿ ಭೌತಿಕ ಪರಿಶೀಲನೆಗಾಗಿ ಮಾದರಿ ಆಯ್ಕೆ ಮಾಡಿಕೊಳ್ಳಲಾಗಿದ್ದಂತಹ ಎಂಟು ಜಿಲ್ಲೆಗಳಲ್ಲಿ 94 ಸ್ಮಾರಕಗಳನ್ನು ಮಾದರಿ ಆಯ್ಕೆಮಾಡಿಕೊಂಡಿದ್ದಿತು. ಆದಾಗ್ಯೂ ಇತಿಹಾಸಪೂರ್ವ /ನವ ಶಿಲಾಯುಗದ ನಿವೇಶನಗಳಿಗೆ ಸಂಬಂಧಿಸಿದಂತೆ ಪಟ್ಟಿಯಲ್ಲಿ 13 ಸ್ಮಾರಕಗಳ ಸ್ಥಳಗಳನ್ನು ಪತ್ತೆಹಚ್ಚಲಾಗಲಿಲ್ಲ. (ಶೇಕಡ14) ಲೆಕ್ಕಪರಿಶೋಧನಾ ತಂಡವನ್ನು ಈ ನಿವೇಶನಗಳ ಸ್ಥಳಗಳಿಗೆ ಕರೆದುಕೊಂಡು ಹೋಗಲು ಇಲಾಖಾ ಅಧಿಕಾರಿ/ಸಿಬ್ಬಂದಿಗೆ ಸಾಧ್ಯವಾಗಲಿಲ್ಲ. ಈ ಸ್ಮಾರಕಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕಗಳಲ್ಲಿ ವಿವರಿಸಲಾಗಿದೆ.

**ಕೋಷ್ಟಕ ಸಂಖ್ಯೆ 3.3: ಸ್ಥಳವನ್ನು ಕಂಡುಹಿಡಿಯಲು ಸಾಧ್ಯವಾಗದ ಸ್ಮಾರಕಗಳ ಪಟ್ಟಿ.**

| ಕ್ರಮ ಸಂಖ್ಯೆ | ಸ್ಮಾರಕದ ಹೆಸರು | ಗ್ರಾಮ | ತಾಲ್ಲೂಕು | ಜಿಲ್ಲೆ |
|---|---|---|---|---|
| 1 | ಇತಿಹಾಸ ಪೂರ್ವ ನಿವೇಶನ | ತೈವಥ್ಥಿ | ಜೇವರ್ಗಿ | ಕಲಬುರಗಿ |
| 2 | ಇತಿಹಾಸ ಪೂರ್ವ ನಿವೇಶನ | ಹಾಲಮರಡಿ | ಜೇವರ್ಗಿ | ಕಲಬುರಗಿ |
| 3 | ಇತಿಹಾಸ ಪೂರ್ವ ನಿವೇಶನ | ಅಗಲ್ಲಿ | ಜೇವರ್ಗಿ | ಕಲಬುರಗಿ |
| 4 | ಇತಿಹಾಸ ಪೂರ್ವ ನಿವೇಶನ | ಕೊಟ್ಟೂರು | ಜೇವರ್ಗಿ | ಕಲಬುರಗಿ |
| 5 | ಇತಿಹಾಸ ಪೂರ್ವ ನಿವೇಶನ | ಗುಡ್ಡರು | ಲಿಂಗಸುಗೂರು | ರಾಯಚೂರು |
| 6 | ಇತಿಹಾಸ ಪೂರ್ವ ನಿವೇಶನ | ಮಚನೂರು | ಲಿಂಗಸುಗೂರು | ರಾಯಚೂರು |
| 7 | ನವ ಶಿಲಾಯುಗದ ನಿವೇಶನಗಳು | ಲಿಂಗಸುಗೂರು | ಲಿಂಗಸುಗೂರು | ರಾಯಚೂರು |
| 8 | ಹಿಂದೂ ದೇವಸ್ಥಾನ | ಬೋಡ್‌ನೂರು | ಮಾನ್ವಿ | ರಾಯಚೂರು |
| 9 | ಇತಿಹಾಸ ಪೂರ್ವ ನಿವೇಶನ | ಹಲಪುರ್ | ಮಾನ್ವಿ | ರಾಯಚೂರು |
| 10 | ಇತಿಹಾಸ ಪೂರ್ವ ನಿವೇಶನ | ಹೊಂಬಳ್ಳೀ | ಸಿಂಧನೂರು | ರಾಯಚೂರು |
| 11 | ಕೋಟೆ | ಗಂಧರ್ವಗಡ | ಖಾನಪುರ | ಬೆಳಗಾವಿ |
| 12 | ಕಾಳಪ್ಪ ದೇವಸ್ಥಾನ ಶಿಲಾಶಾಸನಗಳೊಂದಿಗೆ | ಹೆಗ್ಗೇರಿ | ಹಿರೆಕೆರೂರು | ಹಾವೇರಿ |
| 13 | ಈಶ್ವರ ದೇವಸ್ಥಾನ | ಸಬಲೂರು | ಶಿಗ್ಗಾವಿ | ಹಾವೇರಿ |

- ಜಂಟಿ ಪರೀಕ್ಷಣೆಯ ವೇಳೆಯಲ್ಲಿ ಈ ಕೆಳಗೆ ನಮೂದಿಸಿರುವ 6 ಸ್ಥಳಗಳಲ್ಲಿ ಪಟ್ಟಿ ಮಾಡಲ್ಪಟ್ಟಿರುವಂತಹ ಸ್ಮಾರಕಗಳು ಮತ್ತು ಶಿಲಾಶಾಸನಗಳು ಕಂಡು ಬರಲಿಲ್ಲ / ಆ ನಿವೇಶನಗಳಲ್ಲಿ ಇರಲಿಲ್ಲ.

**ಕೋಷ್ಟಕ ಸಂಖ್ಯೆ 3.4: ಸ್ಮಾರಕಗಳು / ಶಿಲಾಶಾಸನಗಳು ಕಂಡು ಬರದಿದ್ದಂತಹ / ಇರದಿದ್ದಂತಹ ಸ್ಮಾರಕಗಳ ಪಟ್ಟಿ.**

| ಕ್ರಮ ಸಂಖ್ಯೆ | ಸ್ಮಾರಕದ ಹೆಸರು | ಗ್ರಾಮ | ತಾಲ್ಲೂಕು | ಜಿಲ್ಲೆ |
|---|---|---|---|---|
| 1 | ಇತಿಹಾಸ ಪೂರ್ವ ನಿವೇಶನ | ಸಿರ್ವಾರ | ದೇವದುರ್ಗ–ಸಿರ್ವಾರ | ರಾಯಚೂರು |
| 2 | ಇತಿಹಾಸ ಪೂರ್ವ ನಿವೇಶನ | ಮಾನ್ವಿ | ಮಾನ್ವಿ | ರಾಯಚೂರು |
| 3 | ಪ್ರಾಕೃತಿಕ ನೆಲಗವಿ (ಕ್ಯಾವರ್ನ್) ಮತ್ತು ಇತಿಹಾಸ ಪೂರ್ವ ನಿವೇಶನ | ನವಲ್‌ಕಲ್ | ಮಾನ್ವಿ | ರಾಯಚೂರು |
| 4 | ಪರ್ಷಿಯನ್ ಶಿಲಾಶಾಸನದೊಂದಿಗೆ ರವಲನಾಥ ದೇವಸ್ಥಾನಗಳು | ಥಂದ್‌ಘಡ | ಬೆಳಗಾವಿ | ಬೆಳಗಾವಿ |
| 5 | ಗೋವಿಂದ ರಾಜನ ವೈಷ್ಣವ ದೇವಸ್ಥಾನ | ನಿಪಾಣಿ | ಚಿಕ್ಕೋಡಿ | ಬೆಳಗಾವಿ |
| 6 | ನಾರಾಯಣದೇವ ದೇವಸ್ಥಾನ; 5 ಶಿಲಾಶಾಸನ ಕಲ್ಲುಗಳು | ನಿಡಗುಂದಿ | ಶಿಗ್ಗಾವಿ | ಹಾವೇರಿ |

- ಸ್ಮಾರಕಗಳ ನಿರ್ದೇಶಿಕೆಯಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದಂತಹ ಹಾಗೂ ಪಟ್ಟಿ ಮಾಡಲಾಗಿದ್ದಂತಹ ಹಾವೇರಿ ಜಿಲ್ಲೆಯ ನಾಲ್ಕು ಸ್ಮಾರಕಗಳು ವಾಸ್ತವಿಕವಾಗಿ ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ನಿಯಂತ್ರಣದಲ್ಲಿದ್ದವು. ಇಲಾಖೆಯು ಈ ಸ್ಮಾರಕಗಳಿಗೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ಹಿಂಪಡೆದುಕೊಳ್ಳುವಲ್ಲಿ ಹಾಗೂ ತನ್ನ ಸ್ಮಾರಕಗಳ ನಿರ್ದೇಶಿಕೆಯಿಂದ ಅವುಗಳನ್ನು ತೆಗೆದು ಹಾಕುವಲ್ಲಿ ವಿಫಲಗೊಂಡಿದ್ದಿತು.

**ಕೋಷ್ಟಕ ಸಂಖ್ಯೆ 3.5 : ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ನಿಯಂತ್ರಣದಲ್ಲಿದ್ದಂತಹ ಸ್ಮಾರಕಗಳ ಪಟ್ಟಿ**


| ಕ್ರಮ ಸಂಖ್ಯೆ | ಸ್ಮಾರಕದ ಹೆಸರು | ಗ್ರಾಮ | ತಾಲ್ಲೂಕು | ಜಿಲ್ಲೆ |
|---|---|---|---|---|
| 1 | ಸೋಮೇಶ್ವರ, ಕಾಳೇಶ್ವರ ಮತ್ತು ಉದಚಮ್ಮ ಇವರುಗಳ ದೇವಸ್ಥಾನಗಳು; ಶಿಲಾಶಾಸನಗಳು, ತಾಮ್ರದ ಪ್ಲೇಟು | ಹರಳಹಳ್ಳಿ | ಹಾವೇರಿ | ಹಾವೇರಿ |
| 2 | ಸಿದ್ದೇಶ್ವರ ಹಳೆವೂರು ಬಸವಣ್ಣ ಕಾಳಪ್ಪ ದೇವಸ್ಥಾನ | ಹಾವೇರಿ | ಹಾವೇರಿ | ಹಾವೇರಿ |
| 3 | ಗರ್ಗೇಶ್ವರ, ಹನುಮಂತ ದೇವಸ್ಥಾನಗಳು ಶಿಲಾಶಾಸನಗಳ ಜೊತೆ | ಗಳಗನಾಥ | ಹಾವೇರಿ | ಹಾವೇರಿ |
| 4 | ಹರಿಹರ ದೇವಸ್ಥಾನ ಅನೇಕ ಸಂಖ್ಯೆಯ ಶಿಲಾಶಾಸನಗಳ ಜೊತೆ | ಹರಿಹರ | ರಾಣಿಬೆನ್ನೂರು | ಹಾವೇರಿ |

- ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಗಂದರ್ವಘಡದಲ್ಲಿನ ಕೋಟೆಯನ್ನು ಒಂದು ಸ್ಮಾರಕ ಎಂಬುದಾಗಿ ಪಟ್ಟಿ ಮಾಡಲಾಗಿದ್ದು, ಅದು ವಾಸ್ತವಿಕ ಮಹಾರಾಷ್ಟ್ರದಲ್ಲಿರುವುದು. ಇದು ನಿರ್ದೇಶಿಕೆಯಲ್ಲಿ ಸ್ಮಾರಕಗಳ ಯಥಾರ್ಥತೆಯಿಂದ ಕೂಡಿದ ಸ್ಥಳಗಳನ್ನು ನಿರ್ವಹಿಸುವಲ್ಲಿ ಇಲಾಖೆಯು ಅನುಸರಿಸುತ್ತಿರುವಂತಹ ಉದಾಸೀನತೆಯಿಂದ ಕೂಡಿದ ಮಾರ್ಗವನ್ನು ಸೂಚಿಸುತ್ತದೆ.





**ಛಾಯಾಚಿತ್ರ 3.6:** ಮಹಾರಾಷ್ಟ್ರದಲ್ಲಿನ **ಗಂದರ್ವಘಡ ಕೋಟೆಯನ್ನು ತೋರಿಸುವ ನಕಾಶೆ**

- ಜಂಟಿ ಪರೀಕ್ಷಣೆಯ ವೇಳೆಯಲ್ಲಿ, ಇಲಾಖೆಯು ನಿರ್ವಹಿಸಿರುವಂತಹ ಸ್ಮಾರಕಗಳ ಪಟ್ಟಿಯಲ್ಲಿ ನಿರ್ದಿಷ್ಟವಾಗಿ ತಿಳಿಸಿರದ ಐತಿಹಾಸಿಕ ಮೌಲ್ಯವನ್ನು ಹೊಂದಿರುವಂತಹ ಹೆಚ್ಚುವರಿ ಶಿಲಾಶಾಸನಗಳು/ಸ್ಮಾರಕಗಳನ್ನು ಕೂಡ ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ ಕೆಲವು ಶಿಲಾಶಾಸನಗಳು / ಸ್ಮಾರಕಗಳನ್ನು ಪ್ರತಿನಿಧಿಸುವಂತಹ ಛಾಯಾಚಿತ್ರಗಳನ್ನು ಈ ಕೆಳಗೆ ನೀಡಲಾಗಿದೆ.




**ಛಾಯಾಚಿತ್ರ ಸಂಖ್ಯೆ 3.7: ಹೆಮ್ಮಿಗನೂರಿನಲ್ಲಿ ಹೆಚುವರಿ ಸ್ಮಾರಕ (ಹಳೆಯ ದೇವಸ್ಥಾನ).**




**ಛಾಯಾಚಿತ್ರ ಸಂಖ್ಯೆ 3.8: ಸಂಗೂರಿನಲ್ಲಿ ಹೆಚ್ಚುವರಿ ಸ್ಮಾರಕ (ವೀರಕಲ್ಲು). ವೀರಕಲ್ಲು ಯುದ್ದದಲ್ಲಿ ಹೋರಾಡಿದ ಕಲಿಗಳಿಗೆ ಒಂದು ಗೌರವ ಸೂಚಕ ಸ್ಮಾರಕ.**

ಎಲ್ಲಾ 844 ಸ್ಮಾರಕಗಳ ಡಿಜಿಟಲ್ ದಾಖಲೆಗಳ ತಯಾರಿಕೆಗಾಗಿ (3ಡಿ ಮಾದರಿ, ಜಿಪಿಎಸ್ ಸಮನ್ವಯತೆಗಳು, ಇತ್ಯಾದಿಗಳಂತಹ ಮಾಹಿತಿಯೊಂದಿಗೆ) ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿಯೊಂದಿಗೆ ಇಲಾಖೆಯು ಒಪ್ಪಂದ ಮಾಡಿಕೊಂಡಿರುವುದು ಹಾಗೂ ಈ ವರೆಗೆ 530 ಸ್ಮಾರಕಗಳನ್ನು ಪೂರ್ಣಗೊಳಿಲಾಗಿರುವುದು ಎಂದು ಸರ್ಕಾರವು ಉತ್ತರಿಸಿತು (ಆಗಸ್ಟ್ 2023) ಡಿಸೆಂಬರ್–2023ರ ಅಂತ್ಯದ ವೇಳೆಗೆ ಈ ಯೋಜನೆಯನ್ನು ಪೂರ್ಣಗೊಳಿಸಿದ ನಂತರ ಸ್ಮಾರಕಗಳ ಪಟ್ಟಿಯನ್ನು ಡಿಜಿಟಲ್ ಮಾಹಿತಿಯ ಆಧಾರದ ಮೇರೆಗೆ ಪರಿಷ್ಕರಿಸಲಾಗುವುದು. ಇಲಾಖೆಯು ಕೈಗೊಂಡಿರುವ ಈ ಕ್ರಮಕ್ಕಾಗಿ ಲೆಕ್ಕಪರಿಶೋಧನೆಯು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿರುವುದು ಹಾಗೂ ಈ ನಿಟ್ಟಿನಲ್ಲಿ ಈ ಕಾರ್ಯಚಟುವಟಿಕೆಯನ್ನು ಒಂದು ಕಾಲಮಿತಿ ಆಧಾರದ ಮೇರೆಗೆ ಪೂರ್ಣಗೊಳಿಸುವ ಹಾಗೂ ಅದರಂತೆಯೇ ನಿರ್ದೇಶಿಕೆಯನ್ನು ಇಂದಿನದಿನದನ್ನಾಗಿ ಮಾಡುವ ಅಗತ್ಯತೆಯಿರುವುದು ಮತ್ತು 9,552 ಸ್ಮಾರಕಗಳಿಗೆ ಇನ್ನೂ ಸೂಚನೆ ವಿಸ್ತರಿಸಬೇಕಿದೆ.




**ಛಾಯಾಚಿತ್ರ ಸಂಖ್ಯೆ 3.9: ರಾಯಚೂರು ಜಿಲ್ಲೆಯ ಗಬ್ಬೂರಿನ ಭೌಡೀ ಗೇಟಿನ ಸಮೀಪ ಹೆಚ್ಚುವರಿ ಸ್ಮಾರಕ.**




**ಛಾಯಾಚಿತ್ರ ಸಂಖ್ಯೆ 3.10: ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ತಲೈಖಾನ್ ಗ್ರಾಮದಲ್ಲಿ ಗಮನಿಸಲಾದ ಹೆಚ್ಚುವರಿ ಶಿಲಾಶಾಸನ**

***ಸ್ಮಾರಕಗಳಿಂದ ಪ್ರಾಚೀನ ವಸ್ತುಗಳನ್ನು ಪ್ರತ್ಯೇಕಿಸದಿರುವುದು***

**3.5** ಅಧಿನಿಯಮದ ಪರಿಚ್ಛೇದ 2(2)ರ ಅನುಸಾರ **"ಪ್ರಾಚೀನಾವಶೇಷಗಳು"** (i) ಯಾವುದೇ ನಾಣ್ಯ, ಕೆತ್ತನೆಕೃತಿಗಳು, ಹಸ್ತಪ್ರತಿ, ಶಾಸನ ಲಿಪಿಗಳು, ಕಲಾ ಕೆಲಸಗಳು ಅಥವಾ ಕೌಶಲ ಅಥವಾ ಕಲೆಗಾರಿಕೆ, (ii) ಒಂದು ಕಟ್ಟಡ ಅಥವಾ ಗುಹೆಯಿಂದ ಹೊರತೆಗೆಯಲ್ಪಟ್ಟಂತಹ ಯಾವುದೇ ವಸ್ತು ಅಥವಾ ಸಾಮಗ್ರಿ, (iii) ಗತಕಾಲಗಳಲ್ಲಿನ ವಿಜ್ಞಾನ, ಕಲಾಕೌಶಲ್ಯತೆ, ಸಾಹಿತ್ಯ, ಧರ್ಮ, ಸಂಪ್ರದಾಯಗಳು ಅಥವಾ ರೀತಿನೀತಿಗಳಿಗೆ ಸಂಬಂಧಿತ ಯಾವುದೇ ವಸ್ತುಗಳು, ಸಾಮಗ್ರಿಗಳು ಅಥವಾ ಸರಕುಗಳು (iv) ಐತಿಹಾಸಿಕ ಆಸಕ್ತಿ ಇರುವಂತಹ ಯಾವುದೇ ಸರಕುಗಳು ಅಥವಾ ವಸ್ತುಗಳು, ಹಾಗೂ (v) ಈ ಅಧಿಸೂಚನೆಯ ಉದ್ದೇಶಕ್ಕಾಗಿ ಪ್ರಾಚೀನಾವಶೇಷಗಳು ಎಂಬುದಾಗಿ ಅಧಿಕೃತ ರಾಜ್ಯಪತ್ರದಲ್ಲಿ ಸರ್ಕಾರವು ಘೋಷಿಸಬಹುದಾದಂತಹ ಯಾವುದೇ ಸಾಮಗ್ರಿಗಳು, ಸರಕುಗಳನ್ನು ಒಳಗೊಂಡಿರುತ್ತದೆ.

ಇಲಾಖೆಯು ಪ್ರಾಚೀನಾವಶೇಷಗಳನ್ನು ಪ್ರಧಾನ ಸ್ಮಾರಕಗಳಿಂದ ಪ್ರತ್ಯೇಕಗೊಳಿಸಿರುವುದಿಲ್ಲ ಅಥವಾ ಅವುಗಳ ಇರುವಿಕೆಯನ್ನು ದಾಖಲಿಸಿರುವುದಿಲ್ಲ. ಜಂಟಿ ಪರೀಕ್ಷಣೆಯ ವೇಳೆಯಲ್ಲಿ, ಹೊರತೆಗೆಯಲ್ಪಟ್ಟಿದ್ದಂತಹ ಪ್ರಾಚೀನಾವಶೇಷಗಳು ಸಂರಕ್ಷಿತಗೊಳ್ಳದೆಯೇ ಚದುರಿದಂತೆ ಬಿದ್ದಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇಂತಹ ರಕ್ಷಣೆಯಿಲ್ಲದ ಪುರಾತನ ವಸ್ತುಗಳು ಕಳ್ಳತನಕ್ಕೆ ಒಳಗಾಗಿ ಸಾರ್ವಜನಿಕರಿಗೆ ನಷ್ಟವಾಗುತ್ತದೆ. ಹೊರತೆಗೆಯಲ್ಪಟ್ಟಿರುವಂತಹ ಹಾಗೂ ಚದುರಿದಂತೆ ಬಿದ್ದಿರುವಂತಹ ಪ್ರಾಚೀನಾವಶೇಷಗಳ ನಿದರ್ಶನಗಳ ಪೈಕಿ ಮೂರರ ಛಾಯಾಚಿತ್ರಗಳನ್ನು ಈ ಕೆಳಗೆ ನೀಡಲಾಗಿರುವುದು:




**ಚಿತ್ರ ಸಂಖ್ಯೆ 3.11: ಚೆನ್ನಪಟ್ಟಣ ತಾಲ್ಲೂಕಿನ ಶ್ರೀ ಅಪ್ರಮೇಯ ಸ್ವಾಮಿ ದೇವಸ್ಥಾನದಲ್ಲಿ ಬಿದ್ದಿರುವಂತಹ ಪ್ರಾಚೀನ ಹಸ್ತಕೃತಿಗಳು.**




**ಚಿತ್ರ ಸಂಖ್ಯೆ 3.12: ಲಿಂಗಸುಗೂರು ತಾಲ್ಲೂಕಿನ ಕರಡಿ ಗ್ರಾಮದಲ್ಲಿ ಜಂಟಿ ಪರೀಕ್ಷಣೆಯ ವೇಳೆಯಲ್ಲಿ ಗಮನಿಸಲಾದಂತಹ ಶಿಲಾಶಾಸನ.**




**ಚಿತ್ರ ಸಂಖ್ಯೆ 3.13: ಚೆನ್ನಪಟ್ಟಣ ತಾಲ್ಲೂಕಿನ ಶ್ರೀ ರಾಮದೇವರು ಸೀತಾದೇವಿ ದೇವಸ್ಥಾನದ ಹೊರಗಡೆ ಬಿದ್ದಿರುವಂತಹ ಪ್ರಾಚೀನ ಹಸ್ತಕೃತಿಗಳು.**

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳನ್ನು ಅನುಸರಣಾ ಕ್ರಮಗಳಿಗಾಗಿ ಗಮನಕ್ಕೆ ತೆಗೆದುಕೊಳ್ಳಲಾಗಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2022).

**ಶಿಫಾರಸು 5:**

**ಪ್ರಸ್ತುತ ಸ್ಥಿತಿಗತಿಯನ್ನು ಸೂಚಿಸಿದಂತೆ ಸಂರಕ್ಷಿತ ಸ್ಮಾರಕಗಳ ನಿರ್ದೇಶಿಕೆಯನ್ನು ಇಂದಿನದಿನದನ್ನಾಗಿ ಮಾಡಲು ಹಾಗೂ ಸಂರಕ್ಷಿತವಲ್ಲದ ಸ್ಮಾರಕಗಳ ಅಧಿಸೂಚನೆ ಹೊರಡಿಸುವ ಸಲುವಾಗಿ ತತ್‌ಕ್ಷಣದ ಕ್ರಮವನ್ನು ತೆಗೆದುಕೊಳ್ಳುವ ಅಗತ್ಯತೆಯಿರುತ್ತದೆ. ಸರ್ಕಾರವೂ ಪುರಾತನ ವಸ್ತುಗಳನ್ನು ದಾಖಲಿಸಿ ರಕ್ಷಿಸಬೇಕು.**

***ಅಧಿಸೂಚನೆ ಹೊರಡಿಸಿರದ ಸ್ಮಾರಕಗಳ ಸಂರಕ್ಷಣೆ***


**3.6** ಎರಡು ತಿಂಗಳುಗಳ ನೋಟೀಸನ್ನು ನೀಡಿದನಂತರ ಹಾಗೂ ಯಾವುದಾದರೂ ಆಕ್ಷೇಪಣೆಗಳು ಇದ್ದಲ್ಲಿ, ಅವುಗಳನ್ನು ಪರಿಗಣಿಸಿದನಂತರ ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆ ಪ್ರಕಟಿಸುವ ಮೂಲಕ ಯಾವುದೇ ಪ್ರಾಚೀನ ಸ್ಮಾರಕವನ್ನು ಸಂರಕ್ಷಿತ ಸ್ಮಾರಕ ಎಂಬುದಾಗಿ ಘೋಷಿಸಲು ಅಧಿನಿಯಮದ ಪರಿಚ್ಛೇದ 4 ಸರ್ಕಾರಕ್ಕೆ ಅಧಿಕಾರ ನೀಡಿರುತ್ತದೆ. ಅಂತಹ ಅಧಿಸೂಚನೆಗಳು, ಹಿಂಪಡೆದುಕೊಳ್ಳದ ಹೊರತು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅದು ಸಂಬಂಧಿಸಿರುವಂತಹ ಪ್ರಾಚೀನ ಸ್ಮಾರಕವು ಒಂದು ಸಂರಕ್ಷಿತ ಸ್ಮಾರಕ ಎಂಬ ವಾಸ್ತವಾಂಶದ ನಿರ್ಣಾಯಕ ಸಾಕ್ಷ್ಯಾಧಾರವಾಗಿರತಕ್ಕದ್ದು.

ಇಲಾಖೆಯು ಅದಕ್ಕಾಗಿಯೇ ಪ್ರಸ್ತಾವನೆಗಳನ್ನು ಈಗಾಗಲೇ ಸರ್ಕಾರಕ್ಕೆ ಕಳುಹಿಸಿದ್ದು ಸಂರಕ್ಷಿತ ಸ್ಮಾರಕಗಳು ಎಂಬುದಾಗಿ ಅಧಿಸೂಚನೆಯನ್ನು ಇನ್ನೂ ಹೊರಡಿಸಬೇಕಿರುವಂತಹ ಸ್ಮಾರಕಗಳ ಪಟ್ಟಿಯನ್ನು ನಿರ್ವಹಿಸಿರುವುದಿಲ್ಲ. ಮುಂದುವರೆದು, ***ಕಂಡಿಕೆ ಸಂಖ್ಯೆ 3.2ರ*** ಕಡೆಗೆ ಗಮನವನ್ನು ಸೆಳೆಯಲಾಗುತ್ತಿರುವುದು, ಅದರಲ್ಲಿ, ಗ್ರಾಮ ಸಮೀಕ್ಷೆಯ ವೇಳೆಯಲ್ಲಿ 19 ತಾಲ್ಲೂಕುಗಳಲ್ಲಿ ಗುರುತಿಸಲ್ಪಟ್ಟಿರುವಂತಹ 9,552 ಸಂರಕ್ಷಿತವಾಗಿರದ ಸ್ಮಾರಕಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸುವಲ್ಲಿ ಕರ್ನಾಟಕ ಸರ್ಕಾರ/ಇಲಾಖೆಯು ಕ್ರಮಗಳನ್ನು ಕೈಗೊಳ್ಳದಿರುವ ಬಗ್ಗೆ ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸಿರುವುದು.

2017–2022ರ ಅವಧಿಯಲ್ಲಿ ಇಲಾಖೆಯು ಅಧಿಸೂಚನೆ ಹೊರಡಿಸಿರದಂತಹ ಎರಡು ಸ್ಮಾರಕಗಳು ಅವೆಂದರೆ ಹಾವೇರಿ ಜಿಲ್ಲೆಯ ಪಾರಂಪರಿಕ ಕಟ್ಟಡವಾಗಿರುವಂತಹ ಸವಣೂರಿನ ನವಾಬನ ಅರಮನೆ (2017–2020ರಲ್ಲಿ ₹ 2.49 ಕೋಟಿ) ಹಾಗೂ ಹಿರೇಹಣಜಿಯಲ್ಲಿ ಕಲ್ಲೇಶ್ವರ / ಕಲ್ಮೇಶ್ವರ ದೇವಸ್ಥಾನ (2021–22ರಲ್ಲಿ ₹ 0.21 ಕೋಟಿ), ಇವುಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ₹ 2.70 ಕೋಟಿ ಮೊತ್ತದಷ್ಟು ವೆಚ್ಚಗಳನ್ನು ಭರಿಸಿದ್ದಿತು (ಬಂಡವಾಳ ಕಾಮಗಾರಿಗಳಿಗೆ ಹೂಡಿಕೆ ಅಡಿಯಲ್ಲಿ ಬಿಡುಗಡೆಗೊಳಿಸಿದ್ದಂತಹ ಹಣಕಾಸಿನಿಂದ) ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.



**ಛಾಯಾಚಿತ್ರ ಸಂಖ್ಯೆ 3.14 : ಇಲಾಖೆಯು ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳುವ ಮೊದಲು ಸವಣೂರಿನ ನವಾಬನ ಅರಮನೆ.**




**ಛಾಯಾಚಿತ್ರ ಸಂಖ್ಯೆ 3.15: ಇಲಾಖೆಯು ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಂಡನಂತರ ಸವಣೂರಿನ ನವಾಬನ ಅರಮನೆ.**

ಅವುಗಳ ಸಂರಕ್ಷಣಾ ಕಾಮಗಾರಿಗಳ ಮೇಲೆ ವೆಚ್ಚಗಳನ್ನು ಭರಿಸುವ ಮೊದಲು ಈ ಸಂರಕ್ಷಿತಗೊಂಡಿರದ ಸ್ಮಾರಕಗಳ ಬಗ್ಗೆ ಅಧಿಸೂಚನೆಯನ್ನು ಹೊರಡಿಸದಿರಲು ಕಾರಣಗಳು ದಾಖಲೆಗಳಿಂದ ಕಂಡುಬರುತ್ತಿರಲಿಲ್ಲ.

ಕೆಲವು ಸ್ಮಾರಕಗಳು ಸಂರಕ್ಷಿತವಾಗಿರದಿದ್ದಾಗ್ಯೂ ಹಾಗೂ ಅಧಿಸೂಚನೆಯನ್ನು ಹೊರಡಿಸದಿದ್ದಾಗ್ಯೂ, ಅವುಗಳು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಪಳೆಯುಳಿಕೆಗಳ ಅಧಿನಿಯಮ, 1961ರ *ಪರಿಚ್ಛೇದ* 2ರ ಅಡಿಯಲ್ಲಿ ಪ್ರಾಚೀನ ಸ್ಮಾರಕದ ವಿವರಣೆಯನ್ನು ಪೂರೈಸುತ್ತವೆಯಾದ್ದರಿಂದ, ಅವುಗಳನ್ನು ಸಂರಕ್ಷಣಾ ಕಾಮಗಾರಿಗಳಿಗಾಗಿ ಒಂದು ಸಲದ ಕ್ರಮವಾಗಿ ಕೈಗೆತ್ತಿಕೊಳ್ಳಲಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023). ಮುಂದುವರೆದು, ಸವಣೂರಿನ ನವಾಬನ ಅರಮನೆಯನ್ನು ₹ 8.41 ಕೋಟಿ ವೆಚ್ಚದಲ್ಲಿ ಸರ್ಕಾರಿ ವಸ್ತು ಸಂಗ್ರಹಾಲಯವನ್ನಾಗಿ ಪರಿವರ್ತಿಸುವ ಸಲುವಾಗಿ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲಾಗಿರುವುದು ಎಂಬುದಾಗಿಯೂ ತಿಳಿಸಿತು.

ಇಲಾಖೆಯು ಅಧಿಸೂಚನೆ ಹೊರಡಿಸಲ್ಪಟ್ಟಿರುವಂತಹ ಹಾಗೂ ಶಿಥಿಲಾವಸ್ಥೆಯಲ್ಲಿರುವಂತಹ ಬಹಳಷ್ಟು ಸಂಖ್ಯೆಯ ಸ್ಮಾರಕಗಳ ಸಂರಕ್ಷಣಾ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರಲಿಲ್ಲವಾದ್ದರಿಂದ ಹಾಗೂ ಸವಿವರ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯನ್ನು, ಪಡೆದುಕೊಳ್ಳಲಾಗಿದ್ದಿತಾದ್ದರಿಂದ (ಜನವರಿ 2023ರಲ್ಲಿ ಅಷ್ಟೇ) ಉತ್ತರವು ಒಪ್ಪುವಂತಿರುವುದಿಲ್ಲ. ಇದು ಇಲಾಖೆಯು ₹ 2.49 ಕೋಟಿ ಮೊತ್ತವನ್ನು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳದೆಯೇ ಅಧಿಸೂಚನೆ ಹೊರಡಿಸಿರದ ಸ್ಮಾರಕದ ಸಂರಕ್ಷಣಾ ಕಾಮಗಾರಿಗಳಿಗಾಗಿ ಮಾರ್ಗಾಂತರಣ ಮಾಡಿದ್ದಿತು ಎಂಬುದನ್ನು ಸೂಚಿಸುತ್ತಿದ್ದಿತು.

***ಪುರಾತತ್ವ ಸ್ಮಾರಕಗಳ ಸಂರಕ್ಷಣಾ ಸಮಿತಿಯನ್ನು ರಚಿಸದಿರುವುದು***

**3.7** ಪ್ರಾಚೀನಕಾಲದ ಸ್ಮಾರಕಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ವಲಯ ನಿಯಂತ್ರಣಗಳನ್ನು ಅಧಿಸೂಚನೆ ಹೊರಡಿಸಿತು (21 ಏಪ್ರಿಲ್ 2020). ಈ ನಿಯಂತ್ರಣಗಳು ಕರ್ನಾಟಕ ಪಟ್ಟಣ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ, 1961ರ *ಪರಿಚ್ಛೇದ 2 (1ಇಎ) ಮತ್ತು 2 (1ಇಬಿ)* ಅಡಿಯಲ್ಲಿ ಘೋಷಿತವಾಗಿರುವಂತಹ ಎಲ್ಲಾ ಪಾರಂಪರಿಕ ನಿವೇಶನಗಳು, ಕಟ್ಟಡಗಳು, ಆವರಣಗಳು ಹಾಗೂ ಪ್ರಾಕೃತಿಕ ವೈಲಕ್ಷಣಗಳಿಗೆ ಅನ್ವಯಗೊಳ್ಳುವುದು.

ಪ್ರತಿಯೊಂದು ಜಿಲ್ಲೆಯೂ (ಬೆಂಗಳೂರು ಜಿಲ್ಲೆಯನ್ನು ಹೊರತುಪಡಿಸಿದಂತೆ) ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ಇತರೆ ಅಭಿವೃದ್ಧಿ ಪ್ರಾಧಿಕಾರಗಳು ಸದಸ್ಯರುಗಳಾಗಿರುವುದರೊಂದಿಗೆ ಪುರಾತತ್ವ ಸ್ಮಾರಕಗಳ ಸಂರಕ್ಷಣಾ ಸಮಿತಿಯನ್ನು (ಸಮಿತಿ) ಸ್ಥಾಪಿಸತಕ್ಕದ್ದು ಎಂಬುದಾಗಿ ಈ ನಿಯಂತ್ರಣಗಳು ನಿರ್ದಿಷ್ಟಪಡಿಸಿರುವುದು. ಸಮಿತಿಯ ಪ್ರಮುಖ ಕಾರ್ಯಚಟುವಟಿಕೆಗಳು ಪಾರಂಪರಿಕ ನಿವೇಶನಗಳು, ಕಟ್ಟಡಗಳ ಪಟ್ಟಿಯನ್ನು ತಯಾರಿಸುವುದು, ಪರವಾನಿಗೆಗಳನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಪ್ರಾಧಿಕಾರಕ್ಕೆ ಸಲಹೆ ನೀಡುವುದು, ತಾಂತ್ರಿಕ ಸಲಹೆಗಳನ್ನು ನೀಡುವುದು, ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಮೈಸೂರು, ಚಾಮರಾಜನಗರ ಮತ್ತು ಕೋಲಾರ ಜಿಲ್ಲೆಗಳನ್ನು ಹೊರತುಪಡಿಸಿದಂತೆ ಪುರಾತತ್ವ ಸ್ಮಾರಕಗಳ ಸಂರಕ್ಷಣಾ ಸಮಿತಿಯನ್ನು ರಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಮಿತಿಯನ್ನು ರಚಿಸಲಾಗಿದ್ದಂತಹ ಜಿಲ್ಲೆಗಳಲ್ಲಿಯೂ ಸಹ ಪಾರಂಪರಿಕ ನಿವೇಶನಗಳು, ಕಟ್ಟಡಗಳನ್ನು ಗುರುತಿಸುವ ಸಲುವಾಗಿ ಸಭೆಗಳನ್ನು ನಿಯತವಾಗಿ ನಡೆಸಿರಲಿಲ್ಲ. ಉದಾಹರಣೆಗೆ 2020–2022ರ ಅವಧಿಯಲ್ಲಿ ಮೈಸೂರು ಜಿಲ್ಲಾ ಸಮಿತಿಯು ಮೂರು ಸಲ, ಕೋಲಾರ ಜಿಲ್ಲಾ ಸಮಿತಿಯು ಒಂದು ಸಲ ಸಭೆ ಸೇರಿದ್ದಿತು ಹಾಗೂ ಚಾಮರಾಜನಗರ ಜಿಲ್ಲಾ ಸಮಿತಿಯು (ನವಂಬರ್ 2020ರಲ್ಲಿ ರಚಿಸಲ್ಪಟ್ಟಿರುವುದು) ಒಂದು ಸಲವೂ ಸಭೆ ಸೇರಿರಲಿಲ್ಲ.



**ಛಾಯಾಚಿತ್ರ ಸಂಖ್ಯೆ 3.16: ಮೈಸೂರಿನಲ್ಲಿ ಒಂದು ಪಾರಂಪರಿಕ ಸ್ಮಾರಕ ಕಟ್ಟಡ ಎಂಬುದಾಗಿ ಗುರುತಿಸಲ್ಪಟ್ಟಿರುವ ಲ್ಯಾನ್ಸ್‌ಡೌನ್ ಕಟ್ಟಡವು ಕುಸಿತಗೊಳ್ಳುವ ಸ್ಥಿತಿಯಲ್ಲಿರುವುದು.**

ಈ ರೀತಿಯಾಗಿ, ಪುರಾತತ್ವ ಸ್ಮಾರಕಗಳ ಸಂರಕ್ಷಣಾ ಸಮಿತಿಯನ್ನು (ಸಮಿತಿ) ರಚಿಸುವಲ್ಲಿ ವಿಳಂಬಗೊಂಡಿರುವುದು ಪಾರಂಪರಿಕ ನಿವೇಶನಗಳು, ಕಟ್ಟಡಗಳು, ಪ್ರಾಚೀನ ಹಸ್ತಕೃತಿಗಳು, ಇತ್ಯಾದಿಗಳನ್ನು ಗುರುತಿಸದಿರುವಲ್ಲಿ ಪರಿಣಮಿಸಿದ್ದಿತು. ಅದು ಸಂರಕ್ಷಣಾ ಪ್ರಯತ್ನಗಳನ್ನು ಮೇಲ್ವಿಚಾರಣೆ ಮಾಡುವಲ್ಲಿನ ಕೊರತೆಯಲ್ಲಿಯೂ ಕೂಡ ಪರಿಣಮಿಸಿದ್ದಿತು.

ಸಭೆಗಳನ್ನು ನಿಯತವಾಗಿ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಇಲಾಖೆಯು ಪ್ರಧಾನ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ, ಇವರಿಗೆ ಪತ್ರವನ್ನು ಬರೆದಿರುವುದು ಹಾಗೂ ಪಾರಂಪರಿಕ ಸ್ಮಾರಕಗಳನ್ನು ಗುರುತಿಸುವ ಹಾಗೂ ಘೋಷಿಸುವ ಸಲುವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023).

**ಶಿಫಾರಸ್ಸು 6:**

**ಪಾರಂಪರಿಕ ಸ್ಮಾರಕಗಳ ಸಂರಕ್ಷಣಾ ಸಮಿತಿಗಳನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ತಕ್ಷಣವೇ ರಚಿಸುವ ಹಾಗೂ ಇಲಾಖೆ/ ಸರ್ಕಾರವು ಅವುಗಳ ಕಾರ್ಯವೈಖರಿಯನ್ನು ನಿಯತವಾಗಿ ಮೇಲ್ವಿಚಾರಣೆ ಮಾಡುವ ಅಗತ್ಯತೆಯು ಇರುವುದು.**